## ಸಂಕ್ಷಿಪ್ತ ಸುದ್ದಿ

### ಕೌಟುಂಬಿಕ ಹಿಂಸೆ ತಿದ್ದುಪಡಿ ಪರಿಶೀಲನೆ

ವರದಕ್ಷಿಣೆ ಕಿರುಕುಳದಂತಹ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಪಡಿಸಲು ಈಗ ಇರುವ ಭಾರತೀಯ ದಂಡ ಸಂಹಿತೆ ಕಲಂ 498ಎ ಕಾಯ್ದೆಗೆ ತಿದ್ದುಪಡಿ ತರಲು ಸಾರ್ವಜನಿಕರಿಂದ ಹಾಗೂ ಸಂಸ್ಥೆಗಳಿಂದ ಅಹವಾಲು ಸ್ವೀಕರಿಸಲು ಆರಂಭಿಸಿರುವುದು ಉತ್ತಮ ಬೆಳವಣಿಗೆ ಎಂದು 'ನ್ಯಾಷನಲ್ ಫ್ಯಾಮಿಲಿ ಹಾರ್ಮೊನಿ ಸೊಸೈಟಿ'ಯ ಸದಸ್ಯ ಉಮೇಶ್‌ಕುಮಾರ್ ಅಭಿಪ್ರಾಯ ಪಟ್ಟಿದ್ದಾರೆ.

ನಗರದಲ್ಲಿ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಸೊಸೈಟಿಯ ಅವರು, 'ಈ ಕಾಯ್ದೆಯ ಮೂಲಕ ನಿರಪರಾಧಿಗಳನ್ನೂ ಬಂಧಿಸಿ ಕಿರುಕುಳ ನೀಡಬಹುದಾಗಿದೆ. ಇದರಿಂದ ವರನ ತಂದೆ, ತಾಯಿ, ಸಂಬಂಧಿಕರೂ ಬಂಧನಕ್ಕೊಳಗಾಗುತ್ತಾರೆ. ಈ ಕಾಯ್ದೆಗೆ ತಿದ್ದುಪಡಿ ಮಾಡಬೇಕು ಎಂದು ಸಂಸ್ಥೆಯು ಹಲವಾರು ಬಾರಿ ಪ್ರತಿಭಟನೆ ಮಾಡಿತ್ತು. ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಿತ್ತು. ಇದಕ್ಕೆ ಸ್ಪಂದಿಸಿದ ಕೇಂದ್ರ ಸರ್ಕಾರ, ರಾಜ್ಯಸಭಾ ಸದಸ್ಯ ಭಗತ್‌ಸಿಂಗ್ ಕೋಶ್ಯಾರಿ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ನೇಮಕ ಮಾಡಿ ಆ ಮೂಲಕ ಕಾಯ್ದೆ ತಿದ್ದುಪಡಿಗೆ ಸಲಹೆಗಳನ್ನು ಆಹ್ವಾನಿಸಿದೆ. ಇದು ನಮ್ಮ ಪ್ರಯತ್ನಕ್ಕೆ ಸಂದ ಯಶಸ್ಸು' ಎಂದು ನುಡಿದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎನ್. ಮಹೇಶ್, ಸದಸ್ಯ ರಾಘವೇಂದ್ರ ಇದ್ದರು.

### 'ಆಗದ ದಲಿತೋದ್ಧಾರ'

ರಾಜ್ಯ ಬಿಜೆಪಿ ಸರ್ಕಾರ ಬರೀ ಭ್ರಷ್ಟತೆಯಲ್ಲಿ ಮುಳುಗಿಹೋಗಿದ್ದು, ದಲಿತರಿಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಸವಲತ್ತುಗಳನ್ನು ನೀಡುತ್ತಿಲ್ಲ ಎಂದು ದಲಿತ ಸೇನೆ ಆರೋಪಿಸಿದೆ. ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಎಂ.ಎಸ್.ಜಗನ್ನಾಥ್ ಮಾತನಾಡಿ, 'ಸರ್ಕಾರ ಬರೀ ಸ್ವಜನ ಪಕ್ಷಪಾತ, ಭೂಕಬಳಿಕೆಯಲ್ಲಿ ಮುಳುಗಿದೆ. ಇಲ್ಲಿಯವರೆಗೆ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಸಿಗಬೇಕಾದ ಅನುದಾನ ಸಿಕ್ಕಿಲ್ಲ. ಕೂಡಲೇ ಅನುದಾನ ನೀಡಿ ದಲಿತ, ಹಿಂದುಳಿದ ಅಲ್ಪಸಂಖ್ಯಾತರ ನೆರವಿಗೆ ಬರಬೇಕು' ಎಂದು ಆಗ್ರಹಿಸಿದರು.

### ಶಿಬಿರ

ಅವೇಕ್ ಸಂಸ್ಥೆಯು ಇದೇ 16 ರಂದು ಚಾಕೊಲೇಟ್ ತಯಾರಿಕಾ ಶಿಬಿರವನ್ನು ಹಮ್ಮಿಕೊಂಡಿದೆ. ಚಾಕೊಲೇಟ್ ಬಾಲ್, ಬಾದಾಮಿ, ಕಿತ್ತಲೆ, ಎಣ್ಣೆ ಭರಿತ ಇತ್ಯಾದಿ ಚಾಕೊಲೇಟ್ ತಯಾರಿಕಾ ವಿಧಾನವನ್ನು ಪ್ರಾಯೋಗಿಕವಾಗಿ ತಿಳಿಸಿಕೊಡಲಿದೆ. ಆಸಕ್ತರು ಪಾಲ್ಗೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ- ಅವೇಕ್, ಬಿ-76,



ನಗರದ ಮೈಸೂರು ರಸ್ತೆಯಲ್ಲಿರುವ ಬಾಂಬೆ ರೆಯಾನ್ ಸಿದ್ಧ ಉಡುಪು ಕಾರ್ಖಾನೆಯ ಘಟಕವನ್ನು ಏಕಾಏಕಿ ಮುಚ್ಚಿರುವುದನ್ನು ... ಎದುರು ಪ್ರತಿಭಟನೆ ನಡೆಸಿದರು.

# ಐದನೇ ದಿನಕ್ಕೆ ಕಾಲಿಟ್ಟ ಕಾರ್ಮಿಕರ...

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾರ್ಖಾನೆಯನ್ನು ಏಕಾಏಕಿ ಬಂದ್ ಮಾಡಿರುವುದನ್ನು ವಿರೋಧಿಸಿ ನಗರದ ಮೈಸೂರು ರಸ್ತೆಯಲ್ಲಿರುವ (ಜ್ಞಾನಭಾರತಿ ಸಮೀಪ) ಬಾಂಬೆ ರೆಯಾನ್ ಸಿದ್ಧ ಉಡುಪು ಕಾರ್ಖಾನೆಯ ನೂರಾರು ಉದ್ಯೋಗಿಗಳು ಕಾರ್ಖಾನೆ ಎದುರು ನಡೆಸುತ್ತಿರುವ ಪ್ರತಿಭಟನೆ ಶನಿವಾರ ಐದನೇ ದಿನಕ್ಕೆ ಕಾಲಿಟ್ಟಿದೆ.

ಕಾರ್ಖಾನೆಯನ್ನು ಡಿ.8ರಂದು ಏಕಾಏಕಿ ಮುಚ್ಚಲಾಗಿದೆ. ಇದರಿಂದಾಗಿ ಸುಮಾರು 850 ಕಾರ್ಮಿಕರು ಬೀದಿಗೆ ಬಂದಿದ್ದಾರೆ. ಕಾರ್ಖಾನೆಯನ್ನು ಮುಚ್ಚುವುದಾದರೆ ಎಲ್ಲರಿಗೂ ಸೂಕ್ತ ಪರಿಹಾರ ನೀಡಬೇಕು ಅಥವಾ ಇದೇ ಕಾರ್ಖಾನೆಯ ಬೇರೆ ಶಾಖೆಯಲ್ಲಿ ಕೆಲಸ ಕೊಡಿಸಬೇಕು ಎಂದು ಕಾರ್ಮಿಕರು ಒತ್ತಾಯಿಸಿದರು.

ನಾಲ್ಕು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರೂ ಆಡಳಿತ ಮಂಡಳಿಯವರು ಸ್ಪಂದಿಸಿಲ್ಲ. ಕಾರ್ಖಾನೆಯನ್ನು ಬೇರೆಯವರಿಗೆ ಮಾರಲಾಗಿದೆ ಎಂದು ಕ... ಖಚಿತವಾಗಿ... ರಾಮಚಂ... ನೀಡುತ್ತಿಲ್ಲ... ನೀಡಿದ್ದರೂ... ಪ್ರತಿಭಟನ...

ಸಮಸ್ಯೆ... ಹೋರಾಟ... ಎಚ್ಚರಿಕೆ ನಿ...

# ರುಚಿಕರ ಅಡುಗೆ ಮಾಡದ ಪತ್ನಿ...

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರುಚಿಕರವಾಗಿ ಅಡುಗೆ ಮಾಡಲಿಲ್ಲ ಎಂದು ವ್ಯಕ್ತಿಯೊಬ್ಬ ಪತ್ನಿಗೆ ಬೆಂಕಿ ಹಚ್ಚಿ ಕೊಲೆ ಮಾಡಲು ಯತ್ನಿಸಿ ತಾನೂ ತೀವ್ರವಾಗಿ ಗಾಯಗೊಂಡ ದಾರುಣ ಘಟನೆ ಮಹದೇವಪುರದ ಕಾವೇರಿನಗರದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಕಾರು ಚಾಲಕ ಗೋಪಿ ಶಂಕರ (30) ಮತ್ತು ಆತನ ಪತ್ನಿ ನಂದಿನಿ (28) ಗಾಯಗೊಂಡವರು. ಇಬ್ಬರಿಗೂ ಕ್ರಮವಾಗಿ ಶೇ60 ಮತ್ತು 80ರಷ್ಟು ಸುಟ್ಟ ಗಾಯಗಳಾಗಿದ್ದು ಅವರ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡು ವರ್ಷಗಳ ಹಿಂದೆ ಅವರ ವಿವಾಹವಾಗಿತ್ತು ಆದರೆ ಮಕ್ಕಳಿರಲಿಲ್ಲ. ರಾತ್ರಿ ಊಟದ ವಿಷಯದಲ್ಲಿ ಅವರ ಮಧ್ಯೆ ಜಗಳವಾಗಿದೆ. ಅಡುಗೆ ರುಚಿಯಾಗಿಲ್ಲ ಎಂದು ಆತ ಪತ್ನಿ ಜತೆ ಜಗಳವಾಡಿದ್ದಾನೆ. ಇದು ವಿಕೋಪಕ್ಕೆ ಹೋದಾಗ ಸೀಮೆ ಎಣ್ಣೆಯನ್ನು ನಂದಿನಿ ಅವರ ಮೇಲೆ ಸುರಿದ ಆತ ಬೆಂಕಿ ಹಚ್ಚಿದ್ದಾನೆ.

## ಅಪರಾಧ ಸುದ್ದಿ

ಎಲೆಕ್ಟ್ರಾನಿಕ್‌ಸಿಟಿಯಲ್ಲಿ ಶನಿವಾರ ನಸುಕಿನಲ್ಲಿ ನಡೆದಿದೆ.

ತಮಿಳುನಾಡಿನ ಮುರಳಿ (24) ಮೃತಪಟ್ಟವರು. ಇಂಡಿಯನ್ ಎಂಬಾತನನ್ನು ಆಸ್ಪತ್ರೆಗೆ ದಾಖಲಿಸಲ... ಪ್ರಾಣಾಪಾಯದಿಂದ ಪಾರಾಗಿದ್ದಾನೆ ಎಂದು ... ತಿಳಿಸಿದ್ದಾರೆ. ಪಪ್ಪಾಯಿ ಹಣ್ಣು ತುಂಬಿಕೊಂಡು ನಗ... ಮಾರುಕಟ್ಟೆಗೆ ಬರುತ್ತಿದ್ದ ಟೆಂಪೊದಲ್ಲಿ ಮುರಳಿ ಮತ್ತು ... ಇದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಎಲೆಕ್ಟ್ರಾನಿ... ಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದ...

### ಸರ ದರೋಡೆ: ಬಂಧನ

ಮಹಿಳೆಯರ ಚಿನ್ನದ ಸರ ದೋಚುತ್ತಿದ್ದ ಆರೋ... ಲಗ್ಗೆರೆಯ ಎಂ.ಇ.ಐ ಕಾಲೊನಿಯ ಮಹಮ್ಮದ್ ... ಮತ್ತು ತುಮಕೂರು ಎಂಟನೇ ಮೈಲಿನ ವಿಕಾಸನಗರ...